# ಚಿತ್ರದುರ್ಗದ ನಾಯಕರು

## ಕಾಲಾವಧಿ: 16ನೆ ಶತಮಾನದಿಂದ 18ನೆ ಶತಮಾನದ ಉತ್ತರಾರ್ಧದವರೆಗೆ

ಐದನೆ ಮದಕರಿ ನಾಯಕ ೧೭೫೪-೧೭೭೯

# ಚಿತ್ರದುರ್ಗ ಕೋಟೆಯ ಒಳನೋಟ



# ಮೂಲ ಮತ್ತು ಆರಂಭದ ನಾಯಕ

- ವಾಲ್ಮೀಕಿ ಗೋತ್ರ: ಮಹಾನಾಯಕ ಆಚಾರ್ಯರು, ಕಾಮಗೇತಿ ನಾಯಕರು
- ಮತ್ತಿಯ ತಿಮ್ಮಣ್ಣ ನಾಯಕ ಈ ವಂಶದ ಮೂಲ ಪುರುಷ
- ಮತ್ತಿ ದಾವಣಗೆರೆ ಜಿಲ್ಲೆಯಲ್ಲಿದೆ
- ವಿಜಯನಗರದ ಅರಸ ಸಾಳುವ ನರಸಿಂಹನ ಕಾಲದಲ್ಲಿ ಹೊಳಲ್ಕೆರೆಯಲ್ಲಿ ಸೇನಾನಾಯಕನಾಗಿದ್ದ
- ನಂತರ ಹಿರಿಯೂರು & ಚಿತ್ರದುರ್ಗಗಳ ಆಡಳಿತ ವಹಿಸಿಕೊಡಲಾಯಿತು
- ಚಿತ್ರದುರ್ಗದ ಕೋಟೆಯ ನಿರ್ಮಾಪಕ
- ರಾಮರಾಯನ ಸೋದರ ತಿರುಮಲರಾಯ ಹೊಳಲ್ಕೆರೆಯನ್ನು ಮಾಗಣಿಯಾಗಿ ಇವನಿಗೆ ನೀಡಿದ್ದನು

# ಓಬಣ್ಣ ನಾಯಕ: 1582-1602

- ತಿಮ್ಮಣ್ಣ ನಾಯಕನ ಮಗ
- ಚಿತ್ರದುರ್ಗ ನಗರದ ವಿಸ್ತರಣೆ; ಮದಕರಿ ನಾಯಕ ಎಂಬ ಬಿರುದು ಧಾರಣೆ
- ಇವನ ಮಗ ಕಸ್ತೂರಿ ರಂಗಪ್ಪ ನಾಯಕ **– 1602-1652**
- ಮಾಯಕೊಂಡ, ಸಂತೆಬೆನ್ನೂರು ಮತ್ತು ಅಣಜಿಗಳನ್ನು ಗೆದ್ದನು
- ರಣದುಲ್ಲಾಖಾನನಿಗೆ ಇವನು ಸವಾಲೆನಿಸಿದ್ದನು **- 1637**

ಇಮ್ಮಡಿ ಮದಕರಿ ನಾಯಕ: 1652-74

- **ರಾಜ್ಯದ ಆಡಳಿತ ಘಟಕಗಳ ರಚನೆ**
- **ವಿಜಾಪುರದ ಪರವಾಗಿದ್ದ ಕರ್ನೂಲಿನ ಶಾ ಅಬ್ದ್ ಅಲ್ಲಾ ಎಂಬಾತ ಇವನಿಂದ ಸೋತನು**
- **ಇಮ್ಮಡಿ ಓಬಣ್ಣ ನಾಯಕ: 1674-75: ಕೇವಲ ಒಂದು ವರ್ಷದ ಆಡಳಿತ; ಕೊಲೆಗೀಡಾದನು**
- **ಇವನ ನಂತರ ಬಂದ ಶೂರಕಂಠನಾಯಕನೂ ಸಹ ಕೊಲೆಗಿಡಾದನು; ಸೇನಾನಿಗಳಿಂದ.**
- **ಚಿಕ್ಕಣ್ಣ ನಾಯಕ: 1676-86**
- **ಸಮರ್ಥ ದೊರೆ; ಹರಿಹರ ದೇವಾಲಯವನ್ನು ಲೂಟಿ ಮಾಡಲು ಯತ್ನಿಸಿದ ಮೊಗಲ್ ಸೇನೆಯನ್ನು ಹಿಮ್ಮೆಟ್ಟಿಸಿದ್ದನು**

# ದಳವಾಯಿಗಳ ಪ್ರಾಬಲ್ಯ

- ಮುಮ್ಮಡಿ ಮದಕರಿ ನಾಯಕ (ಲಿಂಗಣ್ಣ ನಾಯಕ) 1686-88
- ದಳವಾಯಿ ಮುದ್ದಣ್ಣನಿಂದ ಕೊಲೆಗೀಡಾದನು
- ದೊಣ್ಣೆ ರಂಗಪ್ಪ ನಾಯಕ: 1688-89
- ಮುದ್ದಣ್ಣನ ಕೈಗೊಂಬೆಯಂತಿದ್ದನು

# ಭರಮಪ್ಪ ನಾಯಕ: 1689-1721

- ಇವನು ನಾಯಕರ ಬಿಳಿಚೋಡು ಮನೆತನಕ್ಕೆ ಸೇರಿದವನು
- ದಳವಾಯಿಗಳ ಅಟ್ಟಹಾಸಕ್ಕೆ ತಡೆಯೊಡ್ಡಿ ನಾಯಕರ ಶೌರ್ಯವನ್ನು ಮೆರೆಸಿದವನು
- ಮರಾಠರೊಂದಿಗೆ ಸೇರಿ ಮೊಗಲರ ವಿರುದ್ಧದ ದೊಡ್ಡೇರಿ ಕಾಳಗದಲ್ಲಿ ವಿಜಯಿಜಯಿ – **1695**
- ಮೊಗಲ್ ಸೇನಾನಿ ಖಾಸಿಂಖಾನ್ ಕೊಲೆಯಾದನು
- ಆದರೆ ಪುನಃ ಮೊಗಲರನ್ನು ಎದುರಿಸಬೇಕಾದಾಗ ಅವರೊಂದಿಗೆ ಒಪ್ಪಂದ ಮಾಡಿಕೊಂಡನು
- ಮೊಗಲರ ದಾಳಿಗೆ ನಾಶವಾಗಿದ್ದ ನೀರ್ಥಡಿ ರಂಗನಾಥಸ್ವಾಮಿ ದೇವಾಲಯದ ದುರಸ್ತಿ ಮಾಡಿಸಿದನು
- ಭರಮ ಸಾಗರ ಮತ್ತು ಭೀಮಸಮುದ್ರ ಕೆರೆಗಳ ನಿರ್ಮಾಣ: ಇಂದಿಗೂ ಕೆರೆಗಳು ಅಸ್ತಿತ್ವದಲ್ಲಿವೆ
- ಚಿತ್ರದುರ್ಗದ ನಾಯಕಶ್ರೇಷ್ಠರಲ್ಲಿ ಒಬ್ಬನಾಗಿದ್ದಾನೆ

# ನಾಲ್ಕನೆ ಮದಕರಿ ನಾಯಕ: 1721-48

- ಹರಪನಹಳ್ಳಿ ನಾಯಕರ ವಿರುದ್ಧ ಸೆಣಸಿ ಅಣಜಿ ಕೋಟೆಯನ್ನು ಗೆದ್ದನು
- ಮರಾಠರ ಬಾಜಿರಾಯನಿಗೆ ಚೌತ್ ನೀಡಿದ್ದನು
- ಹರಪನಹಳ್ಳಿಯವರ ಸೇಡಿನ ಕಾರಣ ಕೆಳದಿ ಬಸಪ್ಪ ನಾಯಕನೊಂದಿಗೆ ನಡೆದ ಮಾಯಕೊಂಡದ ಯುದ್ದದಲ್ಲಿ ವೀರಮರಣ **– 1748**
- ಇಮ್ಮಡಿ ಕಸ್ತೂರಿ ರಂಗಪ್ಪ ನಾಯಕ**: 1748-58**
- ಗುತ್ತಿಯ ಮುರಾರಿರಾವ್ ಘೋರ್ಪಡೆಯ ನೆರವಿನಿಂದ ಮಾಯಕೊಂಡವನ್ನು ಮರಳಿ ಗೆದ್ದನು

# ಮದಕರಿ ನಾಯಕ



# ಐದನೆಯ ಮದಕರಿ ನಾಯಕ: 1754-79

- ಕೊನೆಯ ನಾಯಕ ಶ್ರೇಷ್ಠ. ಸಮರ್ಥ ಆಡಳಿತಗಾರ ಮತ್ತು ಪರಾಕ್ರಮಿ
- ಹೈದರಾಲಿಯೊಂದಿಗೆ **1762** ರಲ್ಲಿ ಒಪ್ಪಂದ
- ಕೆಳದಿ ರಾಜ್ಯವನ್ನು ಗೆಲ್ಲಲು ಹೈದರಾಲಿಗೆ ನೆರವು ನೀಡಿದನು
- ನಿಡಗಲ್ಲು ಮತ್ತು ಬಂಕಾಪುರ ಕೋಟೆಗಳನ್ನು ಗೆದ್ದು ಕೊಟ್ಟನು

# ಗಮನವಿಟ್ಟು ಓದಿಕೊಳ್ಳಿರಿ

- ಆದರೆ ಹೈದರಾಲಿಯ ವಿಶ್ವಾಸಾರ್ಹತೆ ಮೇಲೆ ಸಂಶಯ ಬಂದ ಕಾರಣ ಮರಾಠರ ಪೇಶ್ವೆ ಮಾಧವರಾಯನೊಂದಿಗೆ ಸೇರಿ 1764 ರಲ್ಲಿ ಮರಾಠರ ವಿರುದ್ಧ ನಡೆದ ಯುದ್ಧದಲ್ಲಿ ಹೈದರಾಲಿ ಸೋಲಲು ಕಾರಣನಾದನು
- ಹೈದರನೊಂದಿಗೆ ಪುನಃ ಸ್ನೇಹ ಬೆಳೆಸಿದನಾದರೂ, ಸಂಪೂರ್ಣವಾಗಿ ನಂಬಲಿಲ್ಲ
- ಇದರಿಂದಾಗಿ ಮರಾಠರು ೧೭೭೭ ರಲ್ಲಿ ಹೈದರಾಲಿಯ ಮೇಲೆ ಯುದ್ಧ ಮಾಡಿದಾಗ ಮದಕರಿ ತಟಸ್ಥನಾಗಿದ್ದನು

# ಪರಿಣಾಮಗಳನ್ನು ಗಮನಿಸಿರಿ

- ಪರಿಣಾಮವಾಗಿ ಹೈದರಾಲಿ ೧೭೭೮ ರಲ್ಲಿ ಚಿತ್ರದುರ್ಗದ ಕೋಟೆಯ ಮೇಲೆ ದೀರ್ಘಕಾಲದ ಮುತ್ತಿಗೆ ಹಾಕಿದನು
- ಕೋಟೆಯ ಬಲಿಷ್ಠತೆಯ ಕಾರಣ ಮುತ್ತಿಗೆ ವಿಫಲವಾಯಿತು
- ಮುತ್ತಿಗೆ ಹಿಂತೆಗೆಯಲು ಯುದ್ಧವೆಚ್ಚದ ಬೇಡಿಕೆ ಹೈದರಾಲಿಯಿಂದ
- ಆದರೆ ವೆಚ್ಚ ನೀಡದ ಕಾರಣ ಪುನಃ ೧೭೭೯ ರಲ್ಲಿ ಎರಡನೆ ಮುತ್ತಿಗೆ
- ಮದಕರಿಯ ನೆರವಿಗೆ ಬಂದ ಮರಾಠರ ಸೇನಾಪತಿ ಹರಿಪಂಥ್ ಫಡ್ಕೆಗೆ ಹೈದರಾಲಿ ಲಂಚ ನೀಡಿ ಕಳುಹಿಸಿದನು
- ಜೊತೆಗೆ ವಿಶ್ವಾಸದ್ರೋಹದ ಕಾರಣ ಕೋಟೆಯೊಳಗೆ ಹೈದರನ ಸೈನ್ಯ ಪ್ರವೇಶಿಸಿತು